

2022ರ ಜುಲೈ 22, 23ರಂದು ಭೂಕುಸಿತದಿಂದ ಕಂಗೆಟ್ಟ ಕಳಚೆ ಗ್ರಾಮದಲ್ಲಿ ನೀರಿನ ಕೊರತೆಯಿಂದ ಅಡಿಕೆ ತೋಟ ಒಣಗಿದೆ. ಚಿತ್ರ: ದತ್ತಾತ್ರೇಯ ಭಟ್ಟ ಕಣ್ಣಿಪಾಲ

ಹತ್ತು ಹದಿನೈದು ಅಡಿ ಅಗಲದ ತೊರೆಗಳಾಗಿ ಮಾರ್ಪಟ್ಟವು. ಮಕ್ಕಿ ಬಳಿಯ ಇಳುಕಲಿನಲ್ಲಿ ಸದ್ದಿಲ್ಲದೆ ಹರಿಯುತ್ತಿದ್ದ ಪುಟಾಣಿ ಜಲಪಾತವು ಮೂರು ಕವಲುಗಳಾಗಿ ಹರಿದು, ಪುಟ್ಟ ನದಿಯೇ ನಿರ್ಮಾಣವಾದಂತಾಗಿದೆ. ಮರಳು, ಕೆಸರು, ನೀರಿನ ಪ್ರವಾಹದ ರಭಸಕ್ಕೆ ಮರಗಿಡ, ಬಂಡೆಕಲ್ಲುಗಳು ಕೊಚ್ಚಿಹೋಗಿ ಹೊಸತೊಂದು ನದಿಪಾತ್ರವೇ ನಿರ್ಮಾಣವಾಗಿದೆ. ಶಿರಾಡಿ ಅರಣ್ಯ ಪ್ರದೇಶದ ಹೊಂಗಡ ಹಳ್ಳ, ಕೇರಿಹಳ್ಳ, ಕಾಡುಮನೆಹಳ್ಳ, ಹಕ್ಕಿ ಹೊಳೆ ಹಾಗೂ ಮಾರುತಿ ಹೊಳೆಗೆ ನೀರು ಒದಗಿಸುವ ಬೆಟ್ಟದ ಇಳುಕಲುಗಳು ಅಲ್ಲಲ್ಲಿ ಜರಿದಿದ್ದರೆ, ಬಿಸಿಲೆಯ ಬಳಿ ಎತ್ತಿನಭುಜ ಬೆಟ್ಟದಲ್ಲಿ ಕಪಿಲಾ ನದಿ ಹರಿವಿನ ವ್ಯಾಪ್ತಿಯಲ್ಲಿ ಗುಡ್ಡಗಳು ಜರಿದು ಬಿದ್ದಿರುವುದನ್ನು ಸ್ಥಳೀಯರು ಗುರುತಿಸಿದ್ದಾರೆ.

## ಕಾರಣಗಳು ಅಂಗೈನೆಲ್ಲಿ

ಭೂಕುಸಿತಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ನಡೆದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕೆತ್ತಿಕಲ್ ಎಂಬಲ್ಲಿ ಕುಸಿತವಾದಾಗ, ಬೈಂದೂರು ಬಳಿಯ ಒತ್ತಿನೆಣೆ ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿಯ ಮೇಲೆ ಭಾರೀ ಪ್ರಮಾಣದ ಭೂ ಕುಸಿತ ಸಂಭವಿಸಿದಾಗ, ಆಯಾ ಪ್ರದೇಶಕ್ಕೆ ಸಂಬಂಧಿಸಿದ ಅಧ್ಯಯನಗಳು ನಡೆದಿವೆ. 2018ರಲ್ಲಿ ಕೊಡಗಿನಲ್ಲಿ ನಡೆದ ಭೂಕುಸಿತದ ಬಗ್ಗೆ ವಿವರವಾದ ಸಂಶೋಧನೆಗಳು, ಅಧ್ಯಯನಗಳು ನಡೆದು ವರದಿಗಳನ್ನು ಸಲ್ಲಿಸಲಾಗಿದೆ. ಆದರೆ, ಒಂದು ಸಮಸ್ಯೆಯ ಹಿಂದಿರುವ ಕಾರಣಗಳನ್ನು ಪತ್ತೆ ಮಾಡಿ, ಅವುಗಳನ್ನು ಬಗೆಹರಿಸಿ, ನಾಗರಿಕರಲ್ಲಿ ಕ್ಷೇಮಭಾವವನ್ನು ಮೂಡಿಸಬೇಕು ಎಂಬ ಜವಾಬ್ದಾರಿಯಾಗಲೀ, ಇಚ್ಛಾಶಕ್ತಿಯಾಗಲೀ ಸರ್ಕಾರ ಈವರೆಗೆ ಪ್ರದರ್ಶಿಸಿಲ್ಲ ಎನ್ನುವುದು ಸ್ಪಷ್ಟ.

ಭೂಕುಸಿತದ ಅಪಾಯದ ಸಾಧ್ಯತೆಗಳಿರುವ ಪ್ರದೇಶಗಳತ್ತ ಮುನ್ನೆಚ್ಚರಿಕೆ ಮಾದರಿಯಲ್ಲಿ ಗಮನಹರಿಸುವ ಮಾತು ಹಾಗಿರಲಿ, 2019ರಲ್ಲಿ ಸುರಿದ ಮಹಾಮಳೆ ಮತ್ತು ಭೂ ಕುಸಿತದ ಸಂದರ್ಭದಲ್ಲಿ ಮನೆ–ಮಠ ಕಳೆದುಕೊಂಡ ಕುಟುಂಬಗಳಿಗೆ ಪರಿಹಾರ ಒದಗಿಸುವ ಕಾರ್ಯವೇ ಇನ್ನೂ ಪೂರ್ಣಗೊಂಡಿಲ್ಲ. ಅಭಯಾರಣ್ಯದ ಅಂಚಿನ ಊರುಗಳಲ್ಲಿ ವಾಸಿಸುವ ಜನರು ಈ ಕುರಿತು ಮನವಿಗಳನ್ನು ಜನಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಸಲ್ಲಿಸುತ್ತಲೇ ಇದ್ದಾರೆ. ಇತ್ತೀಚೆಗಷ್ಟೇ ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿನ ಮಧುಗುಂಡಿ, ಮಲೆಮನೆ ಭಾಗದ ಸಂತ್ರಸ್ತರು ಮೂಡಿಗೆರೆ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು. ದಕ್ಷಿಣ ಕನ್ನಡದ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ನಿವಾಸದ ಮುಂದೆಯೂ ಸಂತ್ರಸ್ತರು ಪ್ರತಿಭಟನೆ ನಡೆಸಿದ್ದರು. ಸಹ್ಯಾದ್ರಿ ತಪ್ಪಲಿನಲ್ಲಿರುವ ಹೆಚ್ಚಿನ ಊರುಗಳಲ್ಲಿ ಇಂತಹ ಆಗ್ರಹ ಪ್ರತಿಭಟನೆಗಳು, ಮನವಿ ಸಲ್ಲಿಸುವಿಕೆಯ ಪ್ರಕ್ರಿಯೆಗಳು ನಡೆಯುತ್ತಲೇ ಇವೆ. ಇವೆಲ್ಲವನ್ನೂ ಬಗೆಹರಿಸುವ ಸಮಗ್ರವಾದ ಕಾರ್ಯಯೋಜನೆಯೊಂದನ್ನು ಸಿದ್ಧಪಡಿಸುವ ಇಚ್ಛಾಶಕ್ತಿಯನ್ನು ರಾಜ್ಯ ಸರ್ಕಾರ ತೋರಬೇಕಾಗಿದೆ. ಒಂದೆಡೆ, ಪಶ್ಚಿಮ ಘಟ್ಟವೆಂಬ ಅಪೂರ್ವ ಸಂಪತ್ತು ಉಳಿಯಬೇಕು, ಜೊತೆಗೆ ಬೆಟ್ಟದ ಆಶೀರ್ವಾದದೊಂದಿಗೆ ಬಹುಕಾಲದಿಂದ ಜೀವನ ನಡೆಸುತ್ತಿದ್ದ ನಾಗರಿಕರ ಜೀವನ ಸುಗಮವಾಗಿ ಸಾಗುವಂತಾಗಬೇಕು – ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯ ನಿರ್ವಹಿಸಬೇಕಾಗಿದೆ.

## ರಾಜ್ಯಕ್ಕಷ್ಟೇ ಸೀಮಿತವಾದ ಸಂಪತ್ತಲ್ಲ

ದೇಶದ ಅಪೂರ್ವ ಹಸಿರು ಸಂಪತ್ತಾಗಿರುವ ಪಶ್ಚಿಮ ಘಟ್ಟವು ಸುಮಾರು 1600 ಕಿ.ಮೀ. ಉದ್ದವಿದ್ದು, ಆ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಪ್ರದೇಶವು ಕರ್ನಾಟಕದಲ್ಲಿಯೇ ಇದೆ. ತಮಿಳುನಾಡು, ಕೇರಳ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿಯೂ ಹರಿಯುವ ನದಿಗಳಿಗೆ ನೀರೊದಗಿಸುವ, ನದಿಗಳ ಉಗಮ ಸ್ಥಾನವೂ ಆಗಿರುವ ಪಶ್ಚಿಮಘಟ್ಟ ಕರ್ನಾಟಕಕ್ಕಷ್ಟೇ ಸೇರಿದ್ದು ಎಂದು ಹೇಳುವುದಾದರೂ ಹೇಗೆ? 60 ಸಾವಿರ ಚದರ ಕಿ.ಮೀ.ಗೂ ಹೆಚ್ಚು ವ್ಯಾಪ್ತಿಯಲ್ಲಿ ಹರಡಿರುವ ಘಟ್ಟದಿಂದ ಹೊರಡುವ ನದಿಗಳು ದೇಶದ ಒಟ್ಟು ಜಲಾನಯನ ಪ್ರದೇಶದ ಶೇ. 40ರಷ್ಟು ಭಾಗವನ್ನು ಆವರಿಸಿವೆ. ಈ ವಿಸ್ತೀರ್ಣದ ಮೇಲೆ,